ಮಾಡಿದಂತಹ ಅಚ್ಚು ಕಟ್ಟಿನ ಮೇಲೆ ನೀರಿನ ತೆರಿಗೆಯನ್ನು ಹಾಕತಕ್ಕದ್ದು ನಡೆದಿದೆ. ಆದ್ದರಿಂದ ತಾವು ಪುನರ್‌ಪರಿಶೀಲನೆ ಮಾಡಿ ಪ್ರತಿಯೊಂದು ಸ್ಲೂಯಿಸ್‌ನಲ್ಲಿ ಎಷ್ಟು ನೀರಾವರಿಯಾಗುತ್ತದೆಂದು ನೋಡ ಲಿಕ್ಕೆ ಸರ್ಕಾರದಿಂದ ಆದೇಶ ಕೊಡುತ್ತೀರಾ ?

ಶ್ರೀ ಡಿ. ಬಿ. ಚಂದ್ರೇಗೌಡ.—ನೀರಿನ ತೆರಿಗೆಯನ್ನು ವಿಧಿಸಬೇಕಾದರೆ ಓಸೀನೇ ನಿಬಂಧನೆ ಏನಿದೆ ಇದಕ್ಕೆ ಶಾಸನದಲ್ಲಿಯೇ ಅವಕಾಶವಿದೆ. ಯಾರಿಗೆ ತೊಂದರೆಯಾಗುತ್ತದೆ ಅವರು ಸಂಬಂಧಪಟ್ಟ ಅಸಿಸ್ಟೆಂಟ್ ಕಮಿಷನರ್ ಅಥವಾ ಎಕ್ಸಿಕ್ಯುಟೀವ್ ಇಂಜಿನಿಯರ್‌ಗೆ ತಮ್ಮ ಅಪೀಲ್ ಹಾಕಿ ಅವರ ಗಮನಕ್ಕೆ ತಂದರೆ ಶಾಸನದಲ್ಲಿಯೇ ಅವಕಾಶ ಇದೆ. ಇದರ ಬಗ್ಗೆ ಹೊಸದಾಗಿ ಆದೇಶ ಕೊಡತಕ್ಕ ಅವಶ್ಯಕತೆ ಇಲ್ಲ.

Janatha Houses in Shimoga District.

239 SRI L. T. THIMMAPPA HEGDE (Sagar).—Will the Minister of State for Housing be pleased to state:—

(*a*) the number of Janatha Houses constructed in Shimoga district ;out of them, the number of houses constructed in Sagar taluk and the year in which they were constructed ;

(*b*) whether the said houses are in good condition or whether it has come to the notice of the Government that large number of houses are in dilapidated conditions ;

(*c*) whether the houses which are in dilapidated condition were constructed through contractor ; if so, whether it has come to the notice of the Government that due to defects in the construction and not using good quality woods which has lead to the houses being in dilapidated conditions ?

SRI P. F. RODRIGUES (Minister of State for Housing).—

(*a*) 7198.

732

Details of Janatha Houses Constructed in Sagar taluk

		No. of Janatha Houses		Low Income Houses
I Stage	...	1973-74	50	...
II Stage	...	1974-75	120	...
III Stage	...	1975-76	100	...
IV Stage	...	1976-77	126	50
V Stage	...	1977-78	137	...
VI Stage	...	1978-79	85	64
		Total	618	+ 114= 732

(*b*) No.

(*c*) This question does not arise in view of reply to clause 'b'

ಶ್ರೀ ಎಲ್.ಟಿ. ತಿಮ್ಮಪ್ಪ ಹೆಗ್ಗಡೆ.—ಸ್ವಾಮಿ, ನನ್ನ ಎರಡನೆ ಪ್ರಶ್ನೆಯಲ್ಲಿ ಕೆಲವು ಮನೆಗಳು ಬೀಳುವ ಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದ್ದಕ್ಕೆ ಬಂದಿಲ್ಲ ಎಂದು ಹೇಳಿದ್ದೀರಿ. ಇದು ಬಹಳ ಆಶ್ಚರ್ಯವಾಗಿದೆ. ಈಗ ಕಟ್ಟಿರತಕ್ಕಂತಹ ಎಲ್ಲಾ ಮನೆಗಳಲ್ಲೂ ಜನರು ವಾಸವಾಗಿದ್ದಾರೆಂದು ನಿರ್ದಿಷ್ಟವಾಗಿ ತಿಳಿಸುತ್ತೀರಾ?

† ಶ್ರೀ ಪಿ.ಎಫ್. ರೋಡ್ರಿಗ್ಸ್ —ಮನೆಗಳು ಬೀಳುವ ಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲ. ಮಾನ್ಯ ಸದಸ್ಯರು ಯಾವ ಪ್ರದೇಶದಲ್ಲಿ ಮನೆಗಳು ಬೀಳುವ ಸ್ಥಿತಿಯಲ್ಲಿವೆಯೆಂದು ನಿರ್ದಿಷ್ಟವಾಗಿ ತಿಳಿಸಿದರೆ ಅದನ್ನು ನಾವು ನೋಡಿಸುತ್ತೇವೆ. ಆ ರೀತಿ ಯಾವ ತಾಲ್ಲೂಕಿನಲ್ಲಿ, ಯಾವ ಹಳ್ಳಿಯಲ್ಲಿ ಇದೆ ಎಂದು ತಿಳಿಸಿದರೆ ನಾವು ನೋಡಿಸಲಿಕ್ಕೆ ಅನುಕೂಲವಾಗುತ್ತದೆ. ಸರ್ಕಾರದ ಧೋರಣೆ ಏನು ನಾವು ಜನರಿಗೆ ಜಮೀನು ಕೊಡುತ್ತೇವೆ. ಆ ಜಮೀನಿನಲ್ಲಿ ಅವರು ಮನೆ ಕಟ್ಟಬೇಕು. ಅವರು ಕಾರಣಾಂತರಗಳಿಂದ ಮನೆ ಕಟ್ಟಲಿಕ್ಕೆ ಸಾಧ್ಯವಾಗದೇ ಇದ್ದರೆ ಸರ್ಕಾರದಿಂದ ಧನ ಸಹಾಯ ಮಾಡುತ್ತೇವೆ. ಮನೆ ಕಟ್ಟತಕ್ಕಂತಹ ಜವಾಬ್ದಾರಿ ಅವರದಾಗಿರುತ್ತದೆ. ಇಪರು ಈ ಮನೆಗಳಿಗೆ ಬರುವ ಮೊದಲು ಯಾವುದಾದರೂ ಮನೆಗಳಲ್ಲಿ ಇದ್ದರೆ ಆ ಮನೆಗಳನ್ನು ಯಾವರೀತಿ ನೋಡಿಕೊಳ್ಳುತ್ತಾರೆ, ಅದೇ ರೀತಿ ಈ ಮನೆಗಳನ್ನು ಏತಕ್ಕೆ ನೋಡುವುದಿಲ್ಲ. ಒಟ್ಟಿನಲ್ಲಿ ಎಲ್ಲಿ ಮನೆಗಳು ಬೀಳುವ ಸ್ಥಿತಿಯಲ್ಲಿವೆ ಎನ್ನುವುದನ್ನು ಮಾನ್ಯ ಸದಸ್ಯರು ನನಗೆ ತಿಳಿಸಿದರೆ ಅದನ್ನು ನಾನು ನೋಡಿಸುತ್ತೇನೆ

ಶ್ರೀ ಎಲ್.ಟಿ. ತಿಮ್ಮಪ್ಪ ಹೆಗ್ಗಡೆ.—ಸ್ವಾಮಿ,.....

ಶ್ರೀ ಡಿ. ದೇವರಾಜ ಅರಸ್.—ಮಾನ್ಯ ಸದಸ್ಯರು ಸ್ವಲ್ಪ ದಯಮಾಡಿ ಕುಳಿತುಕೊಳ್ಳಬೇಕು. ನಮ್ಮ ಮಾನ್ಯ ಸದಸ್ಯರು ಏನು ಅಭಿಪ್ರಾಯ ಹೇಳುತ್ತಿದ್ದಾರೆ ಅದರಲ್ಲಿ ಸತ್ಯಾಂಶ ಇದೆ. ನಾವು ಅನೇಕ ಮನೆಗಳನ್ನು ಜನರು ತೆಗೆದುಕೊಳ್ಳುತ್ತಾರೆ, ಕೊಂಡುಕೊಳ್ಳುತ್ತಾರೆ ಏನ್ನುವ ಅಭಿಪ್ರಾಯದಿಂದ ಕಟ್ಟಿ ಬಿಟ್ಟಿದ್ದೇವೆ. ಕಟ್ಟಿದಮೇಲೆ ಅನೇಕರು ಅದನ್ನು ತೆಗೆದುಕೊಳ್ಳುವುದಕ್ಕೆ ಒಪ್ಪಲಿಲ್ಲ. ಹೀಗಾಗಿ ಇದು ಇವೊತ್ತು ನೆನ್ನೆ ನಡೆದಿರುವ ವಿಚಾರವಲ್ಲ. ಸುಮಾರು ಹತ್ತಾರು ವರ್ಷಗಳಿಂದಲೂ ಹೀಗೆ ನಡೆದಿದೆ. ಅಲ್ಲಿಂದಲೂ ಅನೇಕ ಸಾಮಾನುಗಳು ಎಲ್ಲಿ ಕೊಡಬೇಕಾಗಿತ್ತೋ ಅಲ್ಲಿ ಕೊಟ್ಟಿಲ್ಲ. ಏನೇನೋ ದಾಕ್ಷಿಣ್ಯದ ಮೇಲೆ ನಡೆದಿದೆ. ಈ ವಿಚಾರ ಏನಾಗಿದೆ ಎಂದರೆ ಅದು ಶಿರಸಿಯಲ್ಲಿ ಎಂದು ಕಾಣುತ್ತದೆ. ಅಲ್ಲಿ ಕಿಟಕಿ ಬಾಗಿಲುಗಳು ಎಲ್ಲಾ ಹೊರಟು ಹೋಗುತ್ತಿವೆ. ಅಲ್ಲಿ ಕೋರ್ಟ್‌ಆರ್ಡರ್ ಆಗಿದೆ, ಬೇರೆ ಮೂರಾಟ ಮಾಡಿಲ್ಲ, ಈ ತರಹ ಅನೇಕ ಇವೆ. ನಾವು ಕಟ್ಟಿದ ಮನೆಗಳಿಗೆ ಯಾರೂ ಬರಲಿಕ್ಕೆ ಇಷ್ಟಪಡುವುದಿಲ್ಲ. ಆದ್ದರಿಂದ ಸರ್ಕಾರದಿಂದ ಎಷ್ಟು ಮನೆಗಳನ್ನು ಕಟ್ಟಿಕೊಟ್ಟಿದೆ, ಉಳಿದದ್ದು ಎಷ್ಟು ಇದೆ ಅದನ್ನು ಯಾವ ರೀತಿ ಡಿಸ್‌ಪೋಸ್ ಮಾಡಬೇಕು ಅದರ ಬಗ್ಗೆ ಶಿಘ್ರದಲ್ಲೇ ಯೋಚಿಸಿ ಮಾಡಬೇಕಾದ್ದು ಯೋಗ್ಯ ಇದೆ, ಅದನ್ನು ಮಾಡಿಸುತ್ತೇವೆ.

ಶ್ರೀ ಎಲ್.ಟಿ. ತಿಮ್ಮಪ್ಪ ಹೆಗ್ಗಡೆ.—ಸ್ವಾಮಿ, ಮನೆಗಳನ್ನು ಕಟ್ಟತಕ್ಕಂತಹ ದೋಷದಿಂದ ಕೆಲವು ಗೋಡೆಗಳು ಬೀಳುವ ಸ್ಥಿತಿಯಲ್ಲಿವೆ. ನನ್ನ ಮುಖ್ಯ ಪ್ರಶ್ನೆ ಏನು ಅಂದರೆ ಜನತಾ ಗೃಹಗಳಿಗೆ ಜನರು ಕೆಲವು ಕಡೆ ವಾಸಕ್ಕೆ ಹೋಗಿಲ್ಲ.

ಶ್ರೀ ಡಿ. ದೇವರಾಜ್ ಅರಸ್.—ಜನತಾ ಗೃಹಗಳು ಎಲ್ಲಾ ಕಡೆ ಆ ರೀತಿ ಆಗಿಲ್ಲ. ತಾವು ಹೇಳ ತಕ್ಕಂಥಾದ್ದು ಬಹಳ ಪರ್‌ಸೆಂಟೇಜ್ ಕಡಿಮೆ ಇದೆ. ಅಲ್ಲಿ, ಇಲ್ಲಿ, ಜಾಗ ಕೊಡುವಾಗ ಗುದ್ದಲಿ ಮೇಲೆ ತೋರಿಸಿರುತ್ತಾರೆ. ಮನೆಗಳನ್ನು ಕಟ್ಟುವಾಗ ಕಂಟ್ರಾಕ್ಟರುಗಳಿಗೆ ಕೊಟ್ಟು ಕಟ್ಟಿಸಿರುತ್ತಾರೆ. Now we have given strict instructions to see that these Janatha houses should never be allowed to be given to the contractors; they should be built by the persons who are in need of houses. ಅಂತಪವರಿಗೆ ಕೊಡಬೇಕು ಅಪನೇ ಕಟ್ಟಬೇಕು. ಈಗ ೭೦ ೮೦ ಸಾವಿರ ಮನೆಗಳನ್ನು ಕಟ್ಟಿರುವಾಗ ಸಾವಿರಾರು ಮನೆಗಳು ಈ ರೀತಿ ಆಗಿರಬಹುದು. That is a small percentage. ಅಲ್ಲಿ ಇನ್‌ಫ್ರಾಸ್ಟ್ರಕ್ಚರ್, ಬಾಗಿಲು ಪಗೈರೆ ಕೊಟ್ಟು ಅಲ್ಲಿಗೆ ಹೋಗುವ ಹಾಗೆ ಮಾಡಬೇಕಾಗುತ್ತದೆ.

ಶ್ರೀ ಎಲ್.ಟಿ. ತಿಮ್ಮಪ್ಪ ಹೆಗ್ಗಡೆ.—ಇನ್ನು ಮುಂದೆ ಕಟ್ಟುವಾಗ ಇದರ ಬಗ್ಗೆ ನಿಗಾ ವಹಿಸುತ್ತೇವೆಂದು ಮಾನ್ಯ ಮಂತ್ರಿಗಳು ತಿಳಿಸಿದ್ದಾರೆ ಬಹಳ ಸಂತೋಷ. ಈಗ ಬೀಳುವ ಪರಿಸ್ಥಿತಿಯಲ್ಲಿರುವ ಮನೆಗಳನ್ನು ರಿಪೇರಿ ಮಾಡದೇ ಹೋದರೆ ಅಲ್ಲಿರತಕ್ಕ ರಾವೆಟೀರಿಯಲ್ಸ್ ಹಾಳಾಗುತ್ತದೆ ಆದರ ಬಗ್ಗೆ ನಿರ್ದಿಷ್ಟ ಆದೇಶ ಕೊಡಬೇಕೆಂದು ಕೇಳುತ್ತೇನೆ.

ಶ್ರೀ ಡಿ. ದೇವರಾಜ್ ಅರಸ್.—ನೀವು ಜನರನ್ನು ಕಳುಹಿಸುವ ವ್ಯವಸ್ಥೆ ಮಾಡಿ ನಾವು ರೀಪೆರಿ ಮಾಡಿಸುತಕ್ಕ ವ್ಯವಸ್ಥೆ ಮಾಡಿಸುತ್ತೇವೆ.

ಶ್ರೀ ಕಡಿದಾಳ್ ದಿವಾಕರ್.—ಸ್ವಾಮಿ, ನಮ್ಮ ಮಲನಾಡು ಪ್ರದೇಶದಲ್ಲಿ ಹಸಿ ಇಟ್ಟಿಗೆಯಿಂದ ಮನೆಗಳನ್ನು ಕಟ್ಟುವುದರಿಂದ ಸ್ವಲ್ಪ ನೀರು ಬಿದ್ದರೆ ಬಿದ್ದುಹೋಗುತ್ತವೆ. ಆದ್ದರಿಂದ ಇನ್ನು ಮುಂದೆ ಮನೆ ಕಟ್ಟಬೇಕಾದರೆ ಸುಟ್ಟ ಇಟ್ಟಿಗೆ ಅಥವಾ ಕಲ್ಲಿನಿಂದ ಕಟ್ಟುವ ಏರ್ಪಾಡು ಮಾಡಬೇಕು.

ಶ್ರೀ ಡಿ. ದೇವರಾಜ್ ಅರಸ್.—ನಿಮ್ಮನ್ನು ಹಸಿ ಇಟ್ಟಿಗೆಯಿಂದ ಮನೆ ಕಟ್ಟಿಸಿ ಎಂದು ಯಾರು ಕಂಪೆಲ್ ಮಾಡಿಲ್ಲ. ನಿಮ್ಮ ತಾಲ್ಲೂಕು ಬೋರ್ಡ್‌ನವರು ಸೇರಿಕೊಂಡು ಮಣ್ಣಿನಲ್ಲೇ ಕಟ್ಟಿಸಿ. ಸುಟ್ಟ ಇಟ್ಟಿಗೆಯಿಂದ ಕಟ್ಟಿಸಬೇಕೆಂದರೆ ದುಡ್ಡು ಜಾಸ್ತಿಯಾಗುತ್ತದೆ. ಹಸಿ ಇಟ್ಟಿಗೆಯಿಂದ ಗೋಡೆ ಕಟ್ಟಿಸುವುದಕ್ಕಿಂತಲೂ ಮಣ್ಣನ್ನೇ ಕಲಸಿ ಗೋಡೆ ಹಾಕಿಸಿದರೆ ಇಟ್ಟಿಗೆ ಗೋಡೆಗಿಂತಲೂ ಬಲವಾಗಿ ಇರುತ್ತದೆ.

9-30 AM

ಶ್ರೀ ಎಸ್.ಎಂ. ಶೀರ್ನಾಳಿ ಚಂದ್ರಶೇಖರ್.—ಸ್ವಾಮಿ, ಮಾನ್ಯ ಸದಸ್ಯರು ಕೇಳಿರತಕ್ಕ (ಅ) ಪ್ರಶ್ನೆ ಬಹಳ ಸ್ಪಷ್ಟವಾಗಿಯೇ ಇದೆ. ಅದು ಏನೆಂದರೆ ''ಸದರಿ ಮನೆಗಳು ಸರಿಯಾದ ಸ್ಥಿತಿಯಲ್ಲಿ ಉಳಿದಿವೆಯೇ ಅಥವಾ ಮನೆಗಳಂ (ಹೆಚ್ಚಿನ ಸಂಖ್ಯೆ) ಬೀಳುವ ಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?'' ಎಂದು.

ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆ ನಿಜವಾಗಿಯೂ ಬಹಳ ಒಳ್ಳೆಯದು. ಸ್ವಾಮಿ, ಇವತ್ತಿನ ದಿವಸ ನಾವು ಅವರಿಗೆ ಒಂದು ಸಾವಿರ ರೂಪಾಯಿ ಸಾಲವನ್ನಾಗಿ ಕೊಡುತ್ತಿದ್ದೇವೆ ಆ ಸಾಲ ಪುನಃ ನಮಗೆ ವಾಪಸ್ಸು ಬರಬೇಕಾಗಿದೆ. ಇವತ್ತು ಏನಾಗಿದೆ ಎಂದರೆ ಈಗ ಕಟ್ಟಿಸಿರುವ ಮನೆಗಳು ಅವರಿಗೆ ವಾಸಕ್ಕೆ ಹೋಗಲು ಯೋಗ್ಯವಾಗಿಲ್ಲ, ಇದರಿಂದಾಗಿ ಅವರು ಅಲ್ಲಿಗೆ ವಾಸಕ್ಕೆ ಹೋಗಿಲ್ಲ. ಆ ಮನೆಗಳನ್ನು ರಿಪೇರಿ ಮಾಡಿಸಲು ಸರ್ಕಾರದಲ್ಲಿ ಗ್ರಾಂಟ್ ಇಲ್ಲ. ಹೀಗಾದರೆ ನಮಗೆ ಹಣ ವಾಪಸ್ಸು ಯಾವ ರೀತಿ ಬರಬೇಕು? ಆದ್ದರಿಂದ ಈ ಮನೆಗಳನ್ನು ರಿಪೇರಿ ಮಾಡಿಸಿ ಅವರಿಗೆ ವಾಸಕ್ಕೆ ಯೋಗ್ಯವನ್ನಾಗಿ ಮಾಡಿಕೊಡಲು ವ್ಯವಸ್ಥೆ ಮಾಡುತ್ತೀರಾ?

† ಶ್ರೀ ಡಿ. ದೇವರಾಜ್ ಅರಸ್.—ಈಗ ಯಾರ್ಯಾರು ಅಲ್ಲಿಗೆ ವಾಸಕ್ಕೆ ಹೋಗುತ್ತೇವೆಂದು ಹೇಳುತ್ತಾರೆ ಅಂಥವರನ್ನು ಕಳುಹಿಸಿಕೊಡಿ ರಿಪೇರಿ ಮಾಡಿಸಿ ಕೊಡುತ್ತೇವೆ. ಒಂದು ವೇಳೆ ನಾವು ರಿಪೇರಿ ಮಾಡಿಸಿಕೊಟ್ಟರೂ ಅವರು ಅಲ್ಲಿಗೆ ವಾಸಕ್ಕೆ ಹೋಗದಿದ್ದರೆ ಅದಕ್ಕೆ ತಗುಲಿದ ಖರ್ಚನ್ನೆಲ್ಲಾ ನೀವೇ ಕೊಡುತ್ತೀರಾ?

ಒಬ್ಬ ಮಾನ್ಯ ಸದಸ್ಯರು.—ಸ್ವಾಮಿ, ಈಗ ವಾಸ ಮಾಡುತ್ತಿರುವ ಮನೆಗಳಲ್ಲಿ ಕೆಲವು ಬೀಳುವ ಸ್ಥಿತಿಯಲ್ಲಿವೆ. ಅಂಥವುಗಳನ್ನು ರಿಪೇರಿ ಮಾಡಿಸಿ ಕೊಡುತ್ತೀರಾ?

ಶ್ರೀ ಡಿ. ದೇವರಾಜ ಅರಸ್.—ಈಗ ವಾಸ ಮಾಡುತ್ತಿರುವ ಮನೆಗಳು ಯಾವುವೂ ಸಾಮಾನ್ಯವಾಗಿ ಬೀಳುವ ಸ್ಥಿತಿಯಲ್ಲಿರುವುದಿಲ್ಲ. ಕೊಡುವುದಕ್ಕೆ, ನಿಲ್ಲುವುದಕ್ಕೆ ಯೋಗ್ಯವಿಲ್ಲದ ಮನೆಗಳನ್ನು ಬೇಕಾದರೆ ರಿಪೇರಿ ಮಾಡಿಸಬಹುದು.

SRI B.V. KAKKILAYA.—In Question (b) there are two parts. In the answer it is stated 'No'. Will the Minister clarify whether 'No' means whether the houses are in good condition or whether it is in answer to second part of the question.

SRI P.F. RODRIGUES.—The answer is to the second part. It means the houses are in good order. If there are any houses requiring repairs, please bring it to our notice and we will definitely look into them.

Surplus Land in Belgaum District.

(285) SRI P.P. HEGRE (Chikkodi).—Will the Minister for Revenue be pleased to state:

(*a*) the total area of land declared as surplus under the provisions of the Karnataka Land Reforms Act, in Belgaum district (talukwise figures may kindly be provided);

(*b*) the total area of such land distributed among the poor people and the number of such families benefitted;

(*c*) out of those the total area of land distributed among the S.Cs people and the number of such families?

SRI B. BASAVALINGAPPA.—Minister for Revenue.

(*a*) —

		(Extent in acres) up to the end of 31-10-1978
Belgaum	...	189
Hukkeri	...	113
Athani	...	2077
Chikodi	...	291
Gokak	...	414
Bailhongal	...	93
Parasagad	...	956
Ramdurg	...	1683
Khanapur	...	4910
Raibagh	...	991
Total	...	11717

(*b*) —

(i) 5920 acres.

(ii) 919 persons